# ಆ್ಯಂಡ್ರಾಯ್ಡ್ ವಿಶೇಷಗಳ ಆ್ಯಪಲ್ ಒಎಸ್

■ **ಶಶಿಕುಮಾರ್ ಸಿ.**



ಆ್ಯಂಡ್ರಾಯ್ಡ್ ಸಾಧನಗಳಲ್ಲಿನ ಸೌಕರ್ಯಗಳನ್ನು ಹೋಲುವ ವಿಶೇಷಗಳನ್ನು ಹೊಂದಿರುವ ಆ್ಯಪಲ್‌ನ ಹೊಸ ಆಪರೇಟಿಂಗ್ ಸಿಸ್ಟಂ 'ಐಒಎಸ್14' (ಐಪಾಡ್‌ಗೆ ಕೊಂಚ ಬದಲಿಸಿದ ಐಒಎಸ್–14) ಅನ್ನು ಈಚೆಗೆ ಕಂಪನಿಯು ಬಿಡುಗಡೆ ಮಾಡಿದೆ. ಈ ಒಎಸ್ ಮೂಲಕ ಐಫೋನ್ ಬಳಕೆದಾರರರು ಹೊಸ ಫೀಚರ್ಸ್‌ಗಳನ್ನು ತಮ್ಮ ಫೋನ್‌ಗಳಲ್ಲಿ ಪಡೆಯಬಹುದಾಗಿದೆ.

ಪ್ರಮುಖವಾಗಿ ಹೋಂ ಸ್ಕ್ರೀನ್‌ನಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು, ಇವು ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ ಅನ್ನೇ ಬಹುತೇಕ ಹೋಲುತ್ತವೆ. ಐಫೋನ್‌ನ ಹೊಸ ಒಎಸ್‌ನಿಂದ ಆ್ಯಂಡ್ರಾಯ್ಡ್ ಒಎಸ್‌ನಂತೆಯೇ ಹೋಂಸ್ಕ್ರೀನ್‌ನಲ್ಲಿ ತಮಗೆ ಬೇಕಾದ ಕಡೆ ಆ್ಯಪ್‌ಗಳನ್ನು ಸರಿಸಬಹುದು. ಜೊತೆಗೆ ಹಲವು ಆ್ಯಪ್‌ಗಳನ್ನು ಒಟ್ಟಾಗಿ ಸೇರಿಸಿ ಪ್ರತ್ಯೇಕ ಗುಂಪುಗಳಾಗಿ ರಚಿಸಬಹುದು.

ಚಿತ್ರದೊಳಗೆ ಮತ್ತೊಂದು ಚಿತ್ರ (ಪಿಕ್ಚರ್ ಇನ್ ಪಿಕ್ಚರ್) 'ಮೋಡ್ ಫೀಚರ್' ಇದರಲ್ಲಿ ಲಭ್ಯ. ಸಣ್ಣ ವಿಂಡೋದಲ್ಲಿ ವಿಡಿಯೊ ವೀಕ್ಷಿಸುತ್ತಾ ಬೇರೆ ಕೆಲಸ ಮಾಡಲು ಇದು ಅನುಕೂಲ. ನಿರ್ದಿಷ್ಟ ಕೆಟಗರಿಯ ಅನುಸಾರ ಸ್ವಯಂಚಾಲಿತವಾಗಿ ಆ್ಯಪ್‌ಗಳ ಗುಂಪು ರಚನೆಯಾಗುವ ವ್ಯವಸ್ಥೆಯೂ ಇದರಲ್ಲಿದೆ. ಜೊತೆಗೆ ಹೋಂ ಸ್ಕ್ರೀನ್‌ನಲ್ಲಿ ಆ್ಯಪ್‌ಗಳ ವಿಜೆಟ್‌ಗಳು ಸೇರ್ಪಡೆಗೊಂಡಿದ್ದು, ಇವುಗಳನ್ನು ಬೇಕಾದ ಕಡೆ ಅತ್ತಿಂದಿತ್ತ ಸರಿಸಬಹುದು.

ಆ್ಯಪಲ್ ಮೆಸೇಜಸ್ ಆ್ಯಪ್‌ನಲ್ಲಿ ಹೊಸ ಮೆಮೋಜಿಗಳನ್ನು ಪರಿಚಯಿಸಿದ್ದು, ಇದರಿಂದ ಸಂದೇಶ ಕಳುಹಿಸುವ ವಿಧಾನಕ್ಕೆ ಇನ್ನಷ್ಟು ಭಾವಸ್ಪರ್ಶ ಸಿಕ್ಕಂತಾಗಿದೆ. ವಾಟ್ಸ್‌ಆ್ಯಪ್‌ನಲ್ಲಿದ್ದಂತೆ ನಿರ್ದಿಷ್ಟ ಮೆಸೇಜ್‌ಗೆ ಉತ್ತರಿಸುವ, ನಿರ್ದಿಷ್ಟ ವ್ಯಕ್ತಿ ಅಥವಾ ಗುಂಪನ್ನು ಆ್ಯಪ್‌ನ ಮೇಲ್ಭಾಗದಲ್ಲಿಯೇ ಇರುವಂತೆ ಪಿನ್ ಮಾಡಿಡುವ, ಗುಂಪಿನಲ್ಲಿ ಉಳ್ಳವರಿಗೆ ನಿರ್ದಿಷ್ಟವಾಗಿ ಅಥವಾ ಖಾಸಗಿಯಾಗಿ ಸಂದೇಶ ಕಳುಹಿಸುವ, ನೋಟಿಫಿಕೇಷನ್‌ಗಳನ್ನು ನಿಯಂತ್ರಿಸುವ ಆಯ್ಕೆಗಳು ಈ ಹೊಸ ಒಎಸ್‌ನಲ್ಲಿ ಲಭ್ಯವಾಗಲಿವೆ.

ಆ್ಯಪಲ್‌ನ ಧ್ವನಿ ಸಹಾಯಕ ಕಿರುತಂತ್ರಾಂಶವಾದ 'ಸಿರಿ'ಗೆ ಹೊಸ ರೂಪ ನೀಡಲಾಗಿದೆ. ಇಡೀ ಪರದೆಯನ್ನೇ ಆವರಿಸಿ ಕಿರಿಕಿರಿ ಉಂಟು ಮಾಡುತ್ತಿದ್ದ ಹಿಂದಿನ ಮಾದರಿಯ ಬದಲಿಗೆ ಪರದೆಯ ಕೆಳಭಾಗದಲ್ಲಿ ಗೋಳಾಕಾರದಲ್ಲಿ ಚಿಕ್ಕದಾಗಿ ಕಾಣಿಸಿಕೊಳ್ಳುವಂತೆ ರೂಪಿಸಲಾಗಿದೆ. 'ಕಾರ್ ಕೀ' ಎಂಬ ಹೊಸ ಫೀಚರ್ ಅನ್ನು ಪರಿಚಯಿಸಲಾಗಿದ್ದು, ಐಫೋನ್ ಬಳಕೆದಾರರು ಬಳಸುವ ಅತ್ಯಾಧುನಿಕ ಕಾರುಗಳನ್ನು ವೈರ್‌ಲೆಸ್ ಆಗಿಯೇ ಅನ್‌ಲಾಕ್ ಮಾಡಬಹುದು ಮತ್ತು ಸ್ಟಾರ್ಟ್ ಮಾಡಬಹುದು.

ಇದರ ಜೊತೆಗೆ ಇನ್‌ಸ್ಟಾಲ್ ಮಾಡದೆಯೇ ಆ್ಯಪ್‌ನ (ಆ್ಯಂಡ್ರಾಯ್ಡ್‌ನ ಇನ್‌ಸ್ಟೆಂಟ್ ಆ್ಯಪ್ಸ್ ರೀತಿ) ನಿರ್ದಿಷ್ಟ ವಿಶೇಷತೆಯನ್ನಷ್ಟೇ ಬಳಸಲು ಅನುಕೂಲವಾಗಲು ಆ್ಯಪ್ ಕ್ಲಿಪ್ಸ್ ಅನ್ನು ಪರಿಚಯಿಸಲಾಗಿದೆ. ಜೊತೆಗೆ ಆ್ಯಪಲ್‌ನ ಸಫಾರಿ ಬ್ರೌಸರ್‌ಗೆ ಹೆಚ್ಚುವರಿ ಸುರಕ್ಷತೆ ಒದಗಿಸಲಾಗಿದೆ. ಒಂದು ವೇಳೆ ಪಾಸ್‌ವರ್ಡ್ ಮಾನಿಟರಿಂಗ್ ವ್ಯವಸ್ಥೆಯು ಹ್ಯಾಕ್ ಆಗಿದ್ದರೆ ಆ ಬಗ್ಗೆ ಈ ಸುರಕ್ಷತಾ ಕ್ರಮದಿಂದ ಎಚ್ಚರಿಕೆ ಸಂದೇಶ ರವಾನೆಯಾಗುತ್ತದೆ.

## ಯಾವೆಲ್ಲಾ ಫೋನ್‌ಗಳಿಗೆ ಈ ಒಎಸ್?

ಐಫೋನ್ 11, 11 ಪ್ರೊ, 11 ಪ್ರೊ ಮ್ಯಾಕ್ಸ್, ಎಕ್ಸ್‌ಎಸ್, ಎಕ್ಸ್‌ಎಸ್ ಮ್ಯಾಕ್ಸ್, ಎಕ್ಸ್‌ಆರ್, ಎಕ್ಸ್, 8, 8 ಪ್ಲಸ್, 7, 7 ಪ್ಲಸ್, 6 ಎಕ್ಸ್, 6 ಎಕ್ಸ್ ಪ್ಲಸ್, ಎಸ್‌ಇ(2020), 6 ಎಸ್‌ಇ (2016) ಫೋನ್‌ಗಳಿಗೆ ಮಾತ್ರ ಹೊಸ ಒಎಸ್ ಲಭ್ಯ.

ಐಪಾಡ್ ಟಚ್ (7ನೇ ಜನರೇಷನ್), 12.9 ಇಂಚ್ ಐಪಾಡ್ ಪ್ರೊ, 11 ಇಂಚ್ ಐಪಾಡ್ ಪ್ರೊ,10.5 ಇಂಚ್ ಐಪಾಡ್ ಪ್ರೊ, 9.7 ಇಂಚ್ ಐಪಾಡ್ ಪ್ರೊ, ಐಪಾಡ್ (6ನೇ ಜನರೇಷನ್), ಐಪಾಡ್ (5ನೇ ಜನರೇಷನ್), ಐಪಾಡ್ ಮಿನಿ (5ನೇ ಜನರೇಷನ್), ಐಪಾಡ್ ಮಿನಿ 4, ಐಪಾಡ್ ಏರ್ (3ನೇ ಜನರೇಷನ್), ಐಪಾಡ್ ಏರ್ 2 ಫೋ ಐಪಾಡ್‌ಗಳಿಗೆ ಈ ಒಎಸ್ ಲಭ್ಯ. ■

